## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಅಕ್ಷರ ದಾಸೋಹ ಕಾರ್ಯಕ್ರಮದಡಿಯಲ್ಲಿನ ಪರಿವರ್ತನಾ ವೆಚ್ಚವನ್ನು ಪರಿಷ್ಕರಿಸುವ ಮತ್ತು ಒಂದು ಕೋಳಿಮೊಟ್ಟೆ/ಬಾಳೆಹಣ್ಣನ್ನು ನೀಡುವ ಬಗ್ಗೆ.

ಓದಲಾಗಿದೆ:- 1.ಕೇಂದ್ರ ಸರ್ಕಾರದ ಪತ್ರ ಸಂಖ್ಯೆ:ಎಫ್-1[9]/2006/ಡೆಸ್ಕ್(ಎಂಡಿಎಂ)/ ದಿ.20.09.2006.

2.ಆಯುಕ್ತರು, ಸಾರ್ವಜನಿಕಶಿಕ್ಷಣ ಇಲಾಖೆ, ಬೆಂಗಳೂರು ರವರ ಪತ್ರ ಸಂಖ್ಯೆ: ಎಂ2.ಅ.ದಾ.ಮೊಟ್ಟೆ.16/2006-07/ದಿ.12.7.2006.

3.ಆಯುಕ್ತರು, ಸಾರ್ವಜನಿಕಶಿಕ್ಷಣ ಇಲಾಖೆ, ಬೆಂಗಳೂರು ರವರ ಪತ್ರ ಸಂಖ್ಯೆ: ಎಂ2.ಅ.ದಾ.ಮಾರ್ಗಸೂಚಿ ಪರಿಷ್ಕರಣೆ 18/2006-07/ದಿ.12.7.2006.

*********

ಪ್ರಸ್ತಾವನೆ:-

ಮೇಲೆ(1)ರಲ್ಲಿ ಓದಲಾದ ಕೇಂದ್ರ ಸರ್ಕಾರದ ಪತ್ರ ಸಂಖ್ಯೆ:ಎಫ್-1[9]/ 2006/ ಡೆಸ್ಕ್ (ಎಂಡಿಎಂ)/ದಿ.20.09.2006.ರ ಮೂಲಕ 1.11.2006 ರಿಂದ ಮಧ್ಯಾಹ್ನ ಬಿಸಿಯೂಟ ಕಾರ್ಯಕ್ರಮಕ್ಕೆ ಕೇಂದ್ರದ ಪಾಲಿನ ಪರಿವರ್ತನಾ ವೆಚ್ಚವನ್ನು ರೂ.1.00ರಿಂದ ರೂ.1.50ಕ್ಕೆ ಹೆಚ್ಚಿಗೆಯಾಗಿರುವುದಾಗಿ ತಿಳಿಸಿದೆ. ಈ ಹೆಚ್ಚುವರಿಯನ್ನು ಬಳಸಿಕೊಂಡು ಪರಿವರ್ತನಾ ವೆಚ್ಚವನ್ನು ಹೆಚ್ಚಿಸುವ ಮತ್ತು ಪೌಷ್ಠಿಕತೆ ಹೆಚ್ಚಿಸುವ ಕಾರ್ಯಕ್ರಮ ಜಾರಿಗೊಳಿಸಲು ಸರ್ಕಾರ ತೀರ್ಮಾನಿಸಿದೆ.

ಈ ಮೇರೆಗೆ ಮೇಲೆ(2)ರಲ್ಲಿ ಓದಲಾದ ದಿ.12.7.2006ರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರದಲ್ಲಿ ಅಕ್ಷರ ದಾಸೋಹ ಕಾರ್ಯಕ್ರಮದಡಿ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ವಾರಕ್ಕೆ ಒಂದರಂತೆ ಕೋಳಿ ಮೊಟ್ಟೆ ಹಾಗೂ ಅದನ್ನು ತಿನ್ನದವರಿಗೆ ಬಾಳೆ ಹಣ್ಣನ್ನು ತಮಿಳುನಾಡು ಮಾದರಿಯಲ್ಲಿ ನೀಡುವ ಯೋಜನೆಗೆ ಅನುಮತಿ ನೀಡುವಂತೆ ಕೋರಿರುತ್ತಾರೆ.

ಮೇಲೆ(3)ರಲ್ಲಿ ಓದಲಾದ ದಿ.20.7.2006ರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರದಲ್ಲಿ ಕೇಂದ್ರ ಸರ್ಕಾರದಿಂದ ಅಕ್ಷರ ದಾಸೋಹ ಕಾರ್ಯಕ್ರಮದಡಿ ಫಲಾನುಭವಿಗಳಿಗೆ ಹಾಲಿ ನೀಡುತ್ತಿರುವ ಪರಿವರ್ತನಾ ವೆಚ್ಚ ರೂ.1.31ನ್ನು ಪರಿಷ್ಕರಿಸುವಂತೆ ಸರ್ಕಾರವನ್ನು ಕೋರಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ: ಇಡಿ 66 ಎಂ.ಎಂ.ಎಸ್ 2006, ಬೆಂಗಳೂರು ದಿ.12.12.2006**

[ಇಡಿ:107:ಸ್ಕೀಮರ(ಯುನಿಕ್) 2006 ದಿ.12.12.2006]

2006-07ನೇ ಸಾಲಿಗೆ ತತ್‌ಕ್ಷಣದಿಂದ ಜಾರಿಗೆ ಬರುವಂತೆ ಅಕ್ಷರ ದಾಸೋಹ ಕಾರ್ಯಕ್ರಮದಡಿ ಸರ್ಕಾರಿ ಮತ್ತು ಖಾಸಗಿ ಅನುದಾನಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರಾಥಮಿಕ ಶಾಲಾ ಮಕ್ಕಳಿಗೆ ಹಾಲಿ ನೀಡಲಾಗುತ್ತಿರುವ ಪರಿವರ್ತನಾ ವೆಚ್ಚವನ್ನು ರೂ.1.31[ಒಂದುರೂಪಾಯಿ ಮೂವತ್ತೊಂದುಪೈಸೆ] ರಿಂದ ರೂ.1.61[ಒಂದುರೂಪಾಯಿಅರವತ್ತೊಂದುಪೈಸೆ] ಕ್ಕೆ ಈ ಕೆಳಕಂಡಂತೆ ಹೆಚ್ಚಿಸಲಾಗಿದೆ.

| | |
|---|---|
| 1. ಬೇಳೆ, ಎಣ್ಣೆ, ಮತ್ತು ಉಪ್ಪು[ಸಾಗಾಣಿಕಾ ವೆಚ್ಚ ಸೇರಿ] | ರೂ.0.71 |
| 2. ತರಕಾರಿ[ಪ್ರತಿ ವಿದ್ಯಾರ್ಥಿಗೆ 50 ಗ್ರಾಂನಂತೆ] | ರೂ.0.50 |
| 3. ಇಂಧನ[ಸಾಗಾಣಿಕಾ ವೆಚ್ಚ ಸೇರಿ] | ರೂ.0.40 |
| | ರೂ.1.61 |

12/12

2006-07ನೇ ಸಾಲಿಗೆ ಈ ಆದೇಶ ಹೊರಡಿಸಿದ ದಿನದಿಂದ ಜಾರಿಗೆ ಬರುವಂತೆ ಅಕ್ಷರ ದಾಸೋಹ ಕಾರ್ಯಕ್ರಮದಡಿ ಸರ್ಕಾರಿ ಮತ್ತು ಖಾಸಗಿ ಅನುದಾನಿತ ಪ್ರಾಥಮಿಕ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ [ಈಗ ಫಲಾನುಭವಿಗಳಾಗಿರುವ] ಎಲ್ಲಾ ವಿದ್ಯಾರ್ಥಿಗಳಿಗೆ ಪ್ರತಿವಾರ ಒಂದು ಕೋಳಿ ಮೊಟ್ಟೆ/ಒಂದು ಬಾಳೆಹಣ್ಣನ್ನು[ಮೊಟ್ಟೆಯನ್ನು ತಿನ್ನದ ವಿದ್ಯಾರ್ಥಿಗಳಿಗೆ] ಅದೇ ದರದಲ್ಲಿ ದೊರೆಯುವ ಒಂದು ಅಥವಾ ಎರಡು ಬಾಳೆಹಣ್ಣನ್ನು ನೀಡತಕ್ಕದ್ದು.

ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರುರವರು ಟೆಂಡರ್ ಕರೆಯಲು ನೀಡುವ ನಿಬಂಧನೆಗಳ ಪ್ರಕಾರ ಕೋಳಿಮೊಟ್ಟೆ ಮತ್ತು ಬಾಳೆಹಣ್ಣನ್ನು ಖರೀದಿಸುವಾಗ ಜಿಲ್ಲಾ ಮಟ್ಟದಲ್ಲಿ ಪ್ರತಿ ಜಿಲ್ಲೆಗೆ ಬೇಕಾಗುವ ಕೋಳಿಮೊಟ್ಟೆಗಳ/ಬಾಳೆಹಣ್ಣುಗಳ ಪ್ರಮಾಣಕ್ಕೆ ಪ್ರತಿ ವಾರದ ದರದ ಆಧಾರದ ಮೇಲೆ ಸಂಬಂಧಿಸಿದ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಟೆಂಡರನ್ನು ಕರೆದು ಕೋಳಿ ಮೊಟ್ಟೆ/ಬಾಳೆ ಹಣ್ಣುಗಳನ್ನು ಕರ್ನಾಟಕ ಪಾರದರ್ಶಕ ಕಾಯ್ದೆಯ ಅಧಿನಿಯಮ-2000 ದಲ್ಲಿನ ಎಲ್ಲಾ ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಖರೀದಿಸತಕ್ಕದ್ದು.

ಟೆಂಡರ್‌ಗಳನ್ನು ಕರೆಯುವ ವಿಧಾನಗಳ ಬಗ್ಗೆ ವಿವರವಾದ ಸುತ್ತೋಲೆಯನ್ನು ಬೆಂಗಳೂರು ಸಾರ್ವಜನಿಕ ಶಿಕ್ಷಣ ಆಯುಕ್ತರು ಹೊರಡಿಸುವರು.

ಈ ಬಗೆಗಿನ ವೆಚ್ಚವನ್ನು ಜಿಲ್ಲಾ ವಲಯ ಆಯವ್ಯಯ ಶೀರ್ಷಿಕೆ:2202-01-800-1-35 [ಯೋಜನೆ] ಅಡಿ ನಿಗಧಿಯಾಗಿರುವ ಜಿಲ್ಲಾವಾರು ಆಯವ್ಯಯದ ಮಿತಿಯೊಳಗೇ ಪ್ರಾರಂಭಿಕವಾಗಿ ಭರಿಸ ತಕ್ಕದ್ದು. ಹೆಚ್ಚುವರಿ ಆಯವ್ಯಯದ ಅಗತ್ಯದ ಬಗ್ಗೆ ಕ್ರೋಢೀಕೃತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಬೆಂಗಳೂರು ಸಾರ್ವಜನಿಕ ಶಿಕ್ಷಣ ಇಲಾಖಾ ಆಯುಕ್ತರಿಗೆ ಸೂಚಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅ.ಟಿ.ಸಂಖ್ಯೆ:ಎಫ್.ಡಿ:963:ವೆಚ್ಚ-8/06/ದಿ.16.10.2006 ರ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ

(ಕೆ.ಶಿವರಾಮೇಶ್ವರ)
ವಿಶೇಷಾಧಿಕಾರಿಗಳು ಹಾಗೂ ಪದನಿಮಿತ್ತ
ಸರ್ಕಾರದ ಸಹ ಕಾರ್ಯದರ್ಶಿ
ಶಿಕ್ಷಣ ಇಲಾಖೆ(ಯೋಜನೆ).

ಗೆ:-

01.ಸಂಕಲನಾಧಿಕಾರಿ, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.
02.ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
03.ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗ.
04.ಎಲ್ಲಾ ಜಿಲ್ಲಾಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಗಳು[ಆಯುಕ್ತರ ಮೂಲಕ]
05.ನಿರ್ದೇಶಕರು,[ಪ್ರಾಥಮಿಕ ಶಿಕ್ಷಣ], ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
06.ಜಂಟಿನಿರ್ದೇಶಕರು[ಅಕ್ಷರದಾಸೋಹ],ಆಯುಕ್ತರಕಛೇರಿ,ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
07.ಮುಖ್ಯ ಲೆಕ್ಕಾಧಿಕಾರಿಗಳು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
08.ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
09.ಉಪನಿರ್ದೇಶಕರು, ನೆಟ್‌ವರ್ಕ್ ಮ್ಯಾನೇಜ್ ಮೆಂಟ್ ಸೆಂಟರ್, ನಂ.45, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
10.ಎಲ್ಲಾ ಜಿಲ್ಲೆಗಳ ಜಿಲ್ಲಾ ಖಜಾನಾಧಿಕಾರಿಗಳು.
11.ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರುಗಳು, ಸಾರ್ವಜನಿಕ ಶಿಕ್ಷಣ ಇಲಾಖೆ[ಆಯುಕ್ತರ ಮೂಲಕ]
12.ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವೆಚ್ಚ-4, ವಿಧಾನಸೌಧ, ಬೆಂಗಳೂರು.
13.ಉಪಕಾರ್ಯದರ್ಶಿಗಳು ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಶಿಕ್ಷಣ ಇಲಾಖೆ, ಬೆಂಗಳೂರು.
14.ಮಾನ್ಯ ಪ್ರಾಥಮಿಕಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
15.ಕಾರ್ಯದರ್ಶಿಗಳು,[ಪ್ರಾಥಮಿಕಮತ್ತು ಪ್ರೌಢ ಶಿಕ್ಷಣ], ಶಿಕ್ಷಣ ಇಲಾಖೆ, ರವರ ಆಪ್ತಕಾರ್ಯದರ್ಶಿಗಳು.
16.ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.
17.ಶಾಖಾ ರಕ್ಷಾ ಕಡತ.